Doc-257
T-P-2

R No KRNN 12 12-3-74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ಸಂಭ್ರಮಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸ್ಥಾಪಕರು: ಅರಮನೆ ಹಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [ತಿ ಪೈ ಸಿ

ಗುಜರಾತಿನಲ್ಲಿ ಮೊದಲು ಶಾಂತಿ ಉಂಟಾಗಬೇಕು

ಅಕಳಂಕಗಳಿಗೆ ಆನಂದದಾಯಕ ಆನಂದ ಸಂವತ್ಸರ–

ಫಾಲ್ಗುಣ ಮಾಸ. ಪಲ್ಗುಣ ! ಉತ್ತರ ಗೋಗ್ರಹಣದ ಜ್ಞಾಪಕ ತಟ್ಟನೆ ಒರುತ್ತದೆ ; ಕೌರವ ಸೇನೆಯು ಗೋಸಂಪತ್ತನ್ನು ಬಂಧಿಸಿ ಅಟ್ಟಕೊಂಡುಹೋಗುತ್ತಿದ್ದಾಗ ಅದಕ್ಕೆ ಅಡ್ಡಿ ಬಂದುಬಿಟ್ಟಿತು ; ಅರ್ಜುನನು ಅವುಗಳನ್ನಾ ಬಿಡಿಸಿ ತರುತ್ತಾನೆ ; ಆದರೆ ಇಂದು ? ಅಧಿಕಾರದಲ್ಲಿರುವವರು ಗೋಸಂಪತ್ತಿನ ನಾಶನಿಲ್ಲಿಸಲು ಬದ್ಧಕಂಕಣರಾಗಿರುವಂತೆ ಭಾಸವಾಗುತ್ತಿಲ್ಲ ಬೃಹನ್ನಳೆಗಳು ನೈಜ ಬೃಹನ್ನಳೆಗಳೇ ಆಗಿರುವರು ಗೋಹತ್ಯೆ ಕಾಮು ಆದೆಂದು ಜಹನಜಾಗುತ್ತದೋ ! ಅದು ಪಹನವಾಗಬೇಕಾದಲ್ಲಿ ಜನತಾ ಜಗದೀಶ್ವರನು ಗೋಭಕ್ತಿಯ ತೃತೀಯ ಕಣ್ಣನ್ನು ತೆರೆಯಬೇಕು ; ಆ ಲಕ್ಷಣ ಕಂಡುಬರುತ್ತಿಲ್ಲ ; ಹೋಳೀಹಬ್ಬ ಕೇವಲ ರಂಗುರಂಗಿನ ಬಣ್ಣದ ಹಬ್ಬವಾಗಿಬಿಟ್ಟಿದೆ.

ಅದಾದಮೇಲೆ ಚಿತ್ರವಿಚಿತ್ರ ಚೈತ್ರಮಾಸ ಆರಂಭ ; ರಾಷ್ಟ್ರೀಯ (ಸರಕಾರಿ) ಶಕಾರಂಭವಾಗುತ್ತದೆ ; ಅದ್ಯಾವ ಹೊಸ ಶಕ ಆರಂಭವಾದರೂ ಗೋ ಮಾತೆಗೆ ಮಾತ್ರ ಅದೇ ಹಳೆಯ ಶಕವೇ ! – ಕೊಲೆಪಾತಕ ಶಕವೇ ಇದೆ.

ಚಂದ್ರಮಾನ ಯುಗಾದಿ – ಆನಂದ ಸಂವತ್ಸರದ ಆರಂಭ.

" ಗೋರಕ್ಷಣ ' ದಲ್ಲಿ ಗೋಬ್ರಾಹ್ಮಣ " ಲೇಖನ ಬರುತ್ತಿತ್ತು ; ಯುಗಾದಿಯಂದು ಅಂತಹ ಇನ್ನೊಂದು ಸನ್ನಿವೇಶ ಜ್ಞಾಪಕಕ್ಕೆ ಬರುತ್ತದೆ ; ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಸ್ಥಾಪಿಸಿರುವ ಪರಮಪೂಜನೀಯ ಬಲಿರಾಮ ಹೆಗ್ಡೇವಾರರು ಜನಿಸಿದ ಪರ್ವದಿನವದು ಗೋಹಂತಕರು ಕೊರೆಮನೆಗೆ ಗೋಮಾತೆಯನ್ನೆಳೆಯುವ ದೃಶ್ಯ ಅವರ ಕಣ್ಣಿಗೆ ಬಿತ್ತು ; ಪಶುಸಾಕರಿಂದ ಅದನ್ನವರು ಬಿಡಿಸಿದರು ; ಗೋರಕ್ಷಣೆಗಾಗಿ, ಗೋಹತ್ಯೆ ಪ್ರತಿಬಂಧಕಕ್ಕಾಗಿ ಅವರು ಪರಿಶ್ರಮಿಸಿರುವ ಕಾರಣ, ರಾಷ್ಟ್ರೀಯ ಸ್ವಯಂಸೇವಕ ಸಂಘವು ಇಂದೂ ಪಶುವಧೆ ಪ್ರತಿಬಂಧಕಕ್ಕಾಗಿ ಇಂದೂ ಪ್ರಯತ್ನಿಸುತ್ತಲಿದೆ ; ಗಲುವು ಕಟ್ಟಿಟ್ಟ ಗಂಟೆಂಬ ಅವರ ಅಚಲ ನಂಬಿಕೆ ಅತಿ ಕ್ಷಿಪ್ರದಲ್ಲೇ ನಿಲೆವೇರಲಿ ಅಕಳುಗಳಿಗೆ ಆನಂದ ಸಂವತ್ಸರವು ಆನಂದದಾಯಕವಾಗಲಿ ; ಗೋವಧೆ ಕೂಡಲೇ ನಿಲ್ಲಲಿ.

— ಶಿವಶಂಕರ

●

ಪಶುಸಂಪತ್ತನ್ನು ಅಭಿವೃದ್ಧಿಗೊಳಿಸಲು ಸ್ವೆತಂಗೆ ಮನವಿ

ಪಂಚವಾರ್ಷಿಕ ಯೋಜನೆಯಲ್ಲಿ ಕ್ಷೀರಾಭಿವೃದ್ಧಿಗೆ ಆದ್ಯತೆಯನ್ನು ನೀಡಲಾಗಿದೆಯೆಂದು ವ್ಯವಸಾಯ ಮತ್ತು ಪಶುಸಂಗೋಪನ ಸಚಿವ ಶ್ರೀ ಎನ್. ಚಿಕ್ಕೇಗೌಡರು ಇತ್ತೀಚೆಗೆ ಬಳ್ಳಾರಿಯಲ್ಲಿ ತಿಳಿಸಿದರು ; ಮಿತ್ರತಳಿ ಹಸುಗಳನ್ನು ಅಭಿವೃದ್ಧಿಗೊಳಿಸುವ ಮೂಲಕ ಹಾಲಿನ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಅವರು ರೈತರಿಗೆ ಮನವಿಮಾಡಿಕೊಂಡರು.

★

ದಿವ್ಯವಾಣಿ

ವಿಶ್ವದಲ್ಲಿ ವಿಜಯಗಳಿಸಲು, ಒಬ್ಬನು ಮೂಢನಂತೆ ಕಾಣಿಸಿಕೊಂಡು, ವಿವೇಕಿಯಾಗಿರುವುದು ಅವಶ್ಯಕವೆಂಬುದನ್ನು ನಾನು ಸದಾ ನೋಡುತ್ತಿರುವೆನು.

— ವಾಲ್ಟೈರ್

ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಮುಖ್ಯಮಂತ್ರಿಗಳವರು

ಮೈಸೂರು– ಮುಖ್ಯಮಂತ್ರಿ ಶ್ರೀ ದೇವರಾಜಅರಸ್‌ರವರು ಭಾನುವಾರ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮಕ್ಕೆ ಭೇಟಿಕೊಟ್ಟು, ಅಲ್ಲಿ ನಡೆದ ಹೋಮವನ್ನು ವೀಕ್ಷಿಸಿ, ಎಲ್ಲರೊಡನೆ ಅವರೂ ಭಜನೆಯಲ್ಲಿ ಭಾಗವಹಿಸಿದ್ದರು. ಆಶ್ರಮದಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳ ಬಗ್ಗೆ ಸಂತೋಷ ವ್ಯಕ್ತಪಡಿಸಿ, ತ್ರಿಮತಸ್ಥ ಅಚಾರ್ಯರ ಸಮ್ಮೇಳನವನ್ನು ಸ್ವಾಮಿಗಳವರು ಏರ್ಪಡಿಸಿದ್ದು ಒಂದು ಸಾಹಸ ಕಾರ್ಯವೆಂದು ಹೇಳಿ, ಸ್ವಾಮಿಗಳು ನಡಾಡುತ್ತಿರುವ ಲೋಕೋದ್ಧಾರ ಕಾರ್ಯಗಳನ್ನೂ ಚಿಂತನೆಗಳನ್ನೂ ಮೆಚ್ಚಿ, ಧರ್ಮಮಾರ್ಗವಲಂಬನೆ ದೈವಾನುಗ್ರಹಕ್ಕೆ ಸಾತ್ಮಕವಾಗುವ ವಿಷಯವನ್ನೂ ವಿವರಿಸಿದರು.

● ಮಾದರಂಪು– ತಮ್ಮ "ಕೇಳಿಕೆ ದಿನ" ಆಚರಣೆ ನಡೆಸಿ, ರೈಲ್ವೇ ವರ್ಕ್‌ಷಾಪ್ ಶಾಖೆಗಳ 8000 ನೌಕರರು ಭಾರಿ ಮೆರವಣಿಗೆ ನಡೆಸಿದರು.

ಅನ್ನ ಸತ್ಯಾಗ್ರಹ

ಅಹಮದಾಬಾದು– ಹಳೇ ಕಾಂಗ್ರೆಸ್ಸಿನ 78 ವರ್ಷದ ನಾಯಕ ಶ್ರೀ ದೆಸಾಯಿಯವರು, ಗುಜರಾತು ಶಾಸನಸಭೆ ವಿಸರ್ಜನೆಗಾಗಿ ನಿರ್ದಿಷ್ಟ ಉಪವಾಸ ಪ್ರಾರಂಭಿಸಿದ್ದಾರೆ

ನಾಯಿಕ್ ಪ್ರತಿಭಟನೆ

ಬೊಂಬಾಯಿ— ಕರ್ನಾಟಕ ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್ ರವರು ಬೆಳಗಾಂ ಮಹಾರಾಷ್ಟ್ರಕ್ಕೆ ಸೇರಲು ಅವಕಾಶ ಕೊಡುವುದಿಲ್ಲವೆಂದು ಹೇಳಿರುವುದರ ಬಗ್ಗೆ ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್ ರವರು ಕೇಂದ್ರಕ್ಕೆ ಪ್ರತಿಭಟನೆ ಸಲ್ಲಿಸಿರುವರು – ಗಡಿ ವ್ಯವಸ್ಥೆ ಕೇಂದ್ರದ ಕೈಗೊಂಡಿರುವುದರಿಂದ ಈ ಬಗ್ಗೆ ಯಾರೂ ಮಾತನಾಡಬಾರದೆಂದು ಅವರ ಹೇಳಿಕೆಯಾಗಿದೆ.

★

ಗುಜರಾತು ಪರಿಸ್ಥಿತಿ

ನವದೆಹಲಿ– ಗುಜರಾತು ಶಾಸನಸಭಾ ವಿಸರ್ಜನೆ ವಿಷಯವನ್ನು ಅಲ್ಲಿ ಸಾಧಾರಣ ಪರಿಸ್ಥಿತಿ ಒದಗಿದ ನಂತರ ಪರ್ಯಾಲೋಚಿಸಲಾಗುವುದೆಂದು ಪಾರ್ಲಿಮೆಂಟಿನ ಎರಡೂ ಸಭೆಗಳಲ್ಲೂ ಗೃಹ ಮಂತ್ರಿ ಶ್ರೀ ಉಮಾಶಂಕರ ದೀಕ್ಷಿತ್ ತಿಳಿಸಿದರು.

★

ರಾಜೀನಾಮೆಗಳು

ಅಹಮದಾಬಾದು– ಶಾಸನಸಭಾ ವಿಸರ್ಜನೆಯ ಕೇಳಿಕೆಗೆ ತಮ್ಮ ಬೆಂಬಲ ನೀಡಿ 17 ಕಾಂಗ್ರೆಸ್ ಶಾಸಕರು ಎಐಸಿಸಿ ಕಾರ್ಯದರ್ಶಿ ಶ್ರೀ ಚಂದ್ರಜಿತ್ ಯಾದವ್ ರಿಗೆ ರಾಜೀನಾಮೆ ಅರ್ಪಿಸಿದರು – ವಿಮಾನ ನಿಲ್ದಾಣದ ಹತ್ತಿರ ನವ ನಿರ್ಮಾಣ ಸಮಿತಿಯ 50 ವಿದ್ಯಾರ್ಥಿಗಳು " ಯಾದವ್ ಹಿಂದಕ್ಕೆ ಹೋಗಿ " ಎಂದು ಘೋಷಣೆ ಕೂಗುತ್ತಾ, ಕಪ್ಪು ಬಾವುಟ ಪ್ರದರ್ಶನ ಮಾಡಿದರು.

★

ಹಾಸನ–ಮಂಗಳೂರು ರೈಲ್ವೇ ಲೈನು

ನವದೆಹಲಿ— ಹಾಸನ–ಮಂಗಳೂರು ರೈಲ್ವೇ ಲೈನನ್ನು 1976 ರ ಡಿಸೆಂಬರಿನ ಹೊತ್ತಿಗೆ ಮುಗಿಯುವ ನಿರೀಕ್ಷೆ ಇದೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಛತ್ರಪತಿ ಶಿವಾಜಿ

ನವದೆಹಲಿ— ಛತ್ರಪತಿ ಶಿವಾಜಿಯ ಕಿರೀಟಧಾರಣಾ ತ್ರಿ-ಶತಮಾನೋತ್ಸವ ಶತಮಾರಂಭವನ್ನು ಉದ್ಘಾಟಿಸುತ್ತಾ, ಭಾರತ ಉಪಾಧ್ಯಕ್ಷ ಶ್ರೀ ಸ ರ್ವ ಪ ಳ್ಳಿ ರಾ ಧಾ ಕೃ ಷ್ಣ ರವರು ಶಿವಾಜಿಯನ್ನು ತುಂಬಾ ಸ್ತುತಿಸಿ, ಅವರು ರಾಷ್ಟ್ರ ನಾಯಕರೆಂದರು.

○

ಬೆತ್ತಲೆಯವರ ಬಂಧನ

ಬೆಲ್ಜಿಯಂ— ಪೂರ್ತಿ ಬೆತ್ತಲೆಯಾಗಿ ನಗರದಲ್ಲೆಲ್ಲಾ ಓಡಾಡಿದ ಮೂರು ಮಂದಿ ಯುವಕರನ್ನು ಪೋಲೀಸರು ಬಂಧಿಸಿದರು.

●

ಶವಗಳ ದಾಸ್ತಾನು

ಅಮೇರಿಕಾದ ಡೆಟ್ರಾಯಿಟ್‌ನಲ್ಲಿ 12 ಪಾಳಿಗಳಿಂದ ಗೋರಿ ತೋಡುವವರು ಮುಷ್ಕರಿಸಿರುವದರಿಂದ ಶವಗಳನ್ನಿಡಲು ಗುಂಡಿಗಳಿಲ್ಲದೆ, 300 ಕ್ಕೂ ಹೆಚ್ಚು ಶವಗಳನ್ನು ಒಂದೂ ಕಡೆ ದಾಸ್ತಾನು ಮಾಡಲಾಗಿದೆ.

★

ಬೆಂಗಳೂರು— ಸೋಷಲಿಸ್ಟ್ ಪಾರ್ಟಿ, ಕಮ್ಯೂನಿಸ್ಟ್ ಪಾರ್ಟಿ, ಪ್ರಜಾಶಕ್ತಿ ಪಾರ್ಟಿ, ರಿಪಬ್ಲಿಕ್ ಪಾರ್ಟಿಗಳು ತಾ॥ 23 ಮತ್ತು 24 ರಂದು ಸಮ್ಮೇಳನ ನಡೆಸಿ, ಏಪ್ರಿಲ್‌ನಲ್ಲಿ "ಕರ್ನಾಟಕ ಬಂದ್" ಗೆ ಕರೆಕೊಡಲು ನಿರ್ಧರಿಸಿವೆ.

Quality Printing Neat Binding

Lakshminarasimha Press

Sivarampet, Mysore 1

Contribute Liberally

to the National Defence Fund

S H A K T I

S U D H A

A Superb Tonic

Help The Gorakshana

— HumanitarianPropoganda Monthly —

ವುಡ್‌ಲಾಂಡ್ಸ್ 8 3 74 ರಿಂದ

ಅಮೋಘ 2 ನೇ ವಾರ

ಹಿಂದಿ ಕಲರ್ ಮಹೋನ್ನತ ಚಿತ್ರ

ಧರ್ಮ

ಪಾತ್ರ – ಪ್ರಾಣ್, ನವೀನ್ ನಿಶ್ಚಲ್, ರೇಖ

ದಿನ 3 ಪ್ರದರ್ಶನಗಳು

★

ಅಪೆರಾ 3 ನೇ ವಾರ

ನಾನೂ ಬಾಳಬೇಕು

ಪಾತ್ರ — ಉದಯಕುಮಾರ್ ಆರತಿ

ಕಥೆ – ನಿರ್ಮಾಪಕ : ಗೋಪಿ ಸಂಗೀತ : ಆರ್. ರತ್ನ

ಚಿತ್ರಕಥೆ, ಸಾಹಿತ್ಯ, ನಿರ್ದೇಶನ – ಸತ್ಯನಾರಾಯಣ

ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ



ಪೂರ್ಣ ನಿಷೇಧವಾಗಲಿ

Protect the Cow

Edited Printed and Published by Dharmapracharanirata M S. Krishna Rao Proprietor at the Satyavadi Press, Chamaraja puram Mysore